ಮಯೂರ ವಿಶೇಷ

# ಹರಿಶ್ಚಂದ್ರ ಮತ್ತು ಹಾರ್ವರ್ಡ್



**ಕೃಷ್ಣಮೂರ್ತಿ ಹನೂರು**

ಕಲೆ: ವಿಶ್ವನಾಥ್ ಎ.ಎಸ್.

ಹಾರ್ವರ್ಡ್ ವಿಶ್ವವಿದ್ಯಾಲಯದ ಪುಸ್ತಕ ಮಳಿಗೆಯಲ್ಲಿ ರಾಘವಾಂಕನ ‘ಹರಿಶ್ಚಂದ್ರ ಕಾವ್ಯ’ದ ಇಂಗ್ಲಿಷ್ ಅವತರಣಿಕೆಯನ್ನು ಕಂಡ ಲೇಖಕರಿಗೆ ಮಹದಾನಂದವಾಯಿತು. ಆನಂದದ ಜೊತೆಗೇ, ಈ ವಿಶ್ವವಿದ್ಯಾನಿಲಯ ಪ್ರಕಟಿಸಿರಬಹುದಾದ ಇನ್ಯಾವ ಗ್ರಂಥದಲ್ಲಿಯೂ ಅಥವಾ ಕಾವ್ಯದಲ್ಲಿಯೂ ರಾಘವಾಂಕ ಪ್ರತಿಪಾದಿಸಿದ ಘನಸತ್ಯದ ಸಂಗತಿ ಇರಲಾರದೆನಿಸಿತು.

ಯೇಲ್ ಯೂನಿವರ್ಸಿಟಿಯಿಂದ ನಾವು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಕಡೆ ಹೊರಟೆವು. ಸೆಪ್ಟೆಂಬರ್ ಕಳೆದು ನವೆಂಬರ್ ತಿಂಗಳ ಮೊದಲ ವಾರವಾದುದರಿಂದ ಬೆಳಗು ಯಾವುದು, ಮಧ್ಯಾಹ್ನ ಯಾವುದು ಎಂದು ಗೊತ್ತಾಗುವಂತಿರಲಿಲ್ಲ. ಕೈಗಡಿಯಾರ ನೋಡಿದರೆ ಮಾತ್ರ ತಿಳಿಯುತ್ತಿತ್ತು. ವಾತಾವರಣ ಅಷ್ಟು ಆಹ್ಲಾದಕರವಾಗಿ, ಅಲ್ಲಿ ಕಂಡ ಹಾರ್ವರ್ಡ್ ಎಂಬ ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾನಿಲಯ ಯಾವುದೋ ಒಂದು ಕಾಲುವೆ ಅಥವಾ ನದಿ ದಂಡೆಯಲ್ಲಿರುವಂತಿತ್ತು. ನಾನು ನ್ಯೂಯಾರ್ಕ್‌ನ ಪ್ರೊ. ಶ್ರೀಧರ್ ಅವರ ಮನೆಯ ದೂರದರ್ಶನದಲ್ಲಿ ರಾತ್ರಿಯ ಹೊತ್ತು ಒಬ್ಬರು ಆಫ್ರಿಕನ್ ಅಮೆರಿಕನ್ ಪ್ರಾಧ್ಯಾಪಕ ಹೆನ್ರಿ ಲೂಯಿಸ್ ಗೇಟ್ಸ್ ತಮ್ಮ ಸಹಚರರೊಡನೆ ಹಿಂದುಳಿದ ಯಾವ್ಯಾವುದೋ ದೇಶ ದೇಶಗಳ ಮೇಲೆಲ್ಲ ಸಂಶೋಧನೆಯಲ್ಲಿ ತೊಡಗಿರುತ್ತಾ ಕಾಲ್ನಡಿಗೆಯಲ್ಲಿ ತಿರುಗಾಡುವುದನ್ನು ಕಂಡಿದ್ದೆ. ಶ್ರೀಧರ್, ಗೇಟ್ಸ್ ಅವರು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೆಂದು ನನಗೆ ತಿಳಿಸಿದ್ದರು. ಇದೀಗ ವಿಶ್ವವಿದ್ಯಾನಿಲಯದ ಆವರಣದಲ್ಲಿ ಗೇಟ್ಸ್ ಎಲ್ಲಿಯಾದರೂ ಕಣ್ಣಿಗೆ ಬೀಳಬಹುದೇ ಎಂದುಕೊಂಡೆ. ಆದರೆ ಅವರು ದೂರದರ್ಶನದಲ್ಲಿ ಎಂದೂ ತಮ್ಮ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಾಣಿಸಿಕೊಂಡೇ ಇರಲಿಲ್ಲ. ನಾವು ಹೋದ ಆ ದಿನದಲ್ಲೂ ಯಾವ ದೇಶದಲ್ಲಿ ಯಾವ ಬುಡಕಟ್ಟು